# ಈಗ,
# ನೀವು
# ದೇವರ ಮಕ್ಕಳು!



ಸಹೋ. ಮೋಹನ್ ಸಿ. ಲಾಜರಸ್

# ಈಗ, ನೀವು
# ದೇವರ ಮಕ್ಕಳು!
## ನೀವು ಭಾಗ್ಯವಂತರು!

ಯೇಸು ಕ್ರಿಸ್ತನನ್ನು ಹೃದಯದಲ್ಲಿ ಅಂಗೀಕರಿಸಿದ ನೀವು ಭಾಗ್ಯವಂತರು.

ಯೇಸು ಕ್ರಿಸ್ತನು ನಿಮ್ಮನ್ನು ಪ್ರೀತಿಸುತ್ತಿದ್ದಾನೆ. ಆದ್ದರಿಂದಲೇ ಆತನು ಈ ಕೂಟಕ್ಕೆ ನಿಮ್ಮನ್ನು ಕರೆದುಕೊಂಡು ಬಂದು ಸಂಧಿಸಿದ್ದಾನೆ.

**"ನೀವು ನನ್ನನ್ನು ಆರಿಸಿ ತೆಗೆದುಕೊಂಡಿಲ್ಲ; ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡೆನು" (ಯೋಹಾನ 15:16)** ಎಂದು ಹೇಳಿದ ಯೇಸು ಕ್ರಿಸ್ತನು ಇಂದು ನಿಮ್ಮನ್ನು ತನ್ನ ಮಕ್ಕಳಾಗಿ ಆರಿಸಿಕೊಂಡಿದ್ದಾನೆ.


ಸೇವಕರು ಪ್ರಸಂಗ ಮಾಡಿದಾಗ ಯೇಸು ಕ್ರಿಸ್ತನೇ ಅವರ ಮೂಲಕ ನಿಮ್ಮೊಂದಿಗೆ ಮಾತನಾಡಿದನು.

ಆದ್ದರಿಂದಲೇ ನೀವು ಪಾಪವನ್ನು ಬಿಟ್ಟು ಮಾನಸಾಂತರ ಹೊಂದಿ ಯೇಸು ಕ್ರಿಸ್ತನನ್ನು ಅಂಗೀಕರಿಸಲು ಮುಂದೆ ಬಂದಿದ್ದೀರಿ.

ದೇವರ ಸ್ವರಕ್ಕೆ ವಿಧೇಯರಾಗಿ ಯೇಸು ಕ್ರಿಸ್ತನನ್ನು ನಿಮ್ಮ ಜೀವನದಲ್ಲಿ ಅಂಗೀಕರಿಸಿಕೊಳ್ಳಲು ನೀವು ತೆಗೆದುಕೊಂಡ ನಿರ್ಧಾರ ನಿಮ್ಮ ಜೀವನದಲ್ಲಿ ಮರೆಯಲಾರದ ಮುಖ್ಯವಾದ ಸಂಭವ.

ನೀವು ಯೇಸುವನ್ನು ಅಂಗೀಕರಿಸಲು ನಿಮ್ಮನ್ನು ಸಮರ್ಪಿಸಿಕೊಂಡು ಮುಂದೆ ಬಂದಾಗ, ನಿಮ್ಮಲ್ಲಿ ಏನು ನಡೆಯಿತು ಎಂಬದನ್ನು ತಿಳಿದುಕೊಂಡರೆ ಕರ್ತನ ಆಶೀರ್ವಾದಗಳನ್ನು ಹೊಂದಿಕೊಳ್ಳಲು ಸಾಧ್ಯ. ಆದ್ದರಿಂದ ಪ್ರಾರ್ಥನಾ ಪೂರ್ವಕವಾಗಿ ಇದನ್ನು ಓದಿರಿ.

# ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ!



ನಿಮ್ಮ ಪಾಪಗಳನ್ನು ಬಿಟ್ಟು ಮಾನಸಾಂತರ ಹೊಂದಿ ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಂಡದ್ದರಿಂದ ಇದುವರೆಗೆ ನೀವು ಮಾಡಿದ ಎಲ್ಲಾ ಪಾಪಗಳು ಕ್ಷಮಿಸಲ್ಪಟ್ಟಿವೆ. ನಿಮ್ಮ ಜನ್ಮ ಪಾಪಗಳು, ನೀವು ಚಿಕ್ಕ ವಯಸ್ಸಿನಿಂದ ತಿಳಿದು ತಿಳಿಯದೆ, ಗೊತ್ತಿದ್ದು ಗೊತ್ತಿಲ್ಲದೆ ಮಾಡಿದ ಎಲ್ಲಾ ಪಾಪಗಳನ್ನು ಕರ್ತನು ಕ್ಷಮಿಸಿಬಿಟ್ಟಿದ್ದಾನೆ.

ನಿಮ್ಮ ಪಾಪಗಳನ್ನೆಲ್ಲಾ ಯೇಸು ಕ್ರಿಸ್ತನು ಶಿಲುಬೆಯಲ್ಲಿ ಹೊತ್ತು ಮುಗಿಸಿದ್ದರಿಂದ ಯೇಸು ಕ್ರಿಸ್ತನ ಮೂಲಕ ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ. **(1 ಪೇತ್ರ 2:24).** ಇದನ್ನು ನೀವು ನಂಬಬೇಕು.

**"ದೋಷಗಳನ್ನು ಮುಚ್ಚಿಕೊಳ್ಳುವವನಿಗೆ ಶುಭವಾಗದು; ಅವುಗಳನ್ನು ಒಪ್ಪಿಕೊಂಡು ಬಿಟ್ಟುಬಿಡುವವನಿಗೆ ಕರುಣೆ ದೊರೆಯುವದು" (ಜ್ಞಾನೋಕ್ತಿ 28:13).**

**"...ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣ ಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ." (1 ಯೋಹಾನ 1:7)** ಎಂಬ ದೇವರ ವಾಕ್ಯಕ್ಕನುಸಾರವಾಗಿ ಪಾಪಗಳನ್ನು ಒಪ್ಪಿಕೊಂಡು ಪ್ರಾರ್ಥಿಸಿದ ನಿಮ್ಮನ್ನು ಕರ್ತನು ಕನಿಕರಿಸಿದ್ದಾನೆ. ಯೇಸು ಕ್ರಿಸ್ತನ ರಕ್ತ ಎಲ್ಲಾ ಪಾಪಗಳನ್ನು ನೀಗಿಸಿ ನಿಮ್ಮ ಹೃದಯವನ್ನು ಶುದ್ಧೀಕರಿಸಿದೆ.

ಇನ್ನು ಮೇಲೆ ಹಳೆಯ ಪಾಪಗಳಿಗೂ ನಿಮಗೂ ಸಂಬಂಧವಿಲ್ಲ. ಇದುವರೆಗೆ ನೀವು ಮಾಡಿದ ಪಾಪಗಳು ಎಷ್ಟೇ ದೊಡ್ಡದಾಗಿದ್ದರೂ ಎಷ್ಟು ಭಯಂಕರವಾಗಿದ್ದರೂ ಆ ಪಾಪಗಳನ್ನೆಲ್ಲಾ ಕರ್ತನು ಕ್ಷಮಿಸಿ ಮರೆತುಬಿಟ್ಟಿದ್ದಾನೆ.

**"ಪೂರ್ವಕ್ಕೂ ಪಶ್ಚಿಮಕ್ಕೂ ಎಷ್ಟು ದೂರವೋ ನಮ್ಮ ದ್ರೋಹಗಳನ್ನು ನಮ್ಮಿಂದ ತೆಗೆದು ಅಷ್ಟು ದೂರ ಮಾಡಿದ್ದಾನೆ." (ಕೀರ್ತನೆ 103:12).**

ಈ ದೇವರ ವಾಕ್ಯವನ್ನು ನಂಬಿ ಕರ್ತನನ್ನು ಸ್ತುತಿಸಿರಿ.

ಕರ್ತನೇ ನನ್ನ ಪಾಪಗಳನ್ನೆಲ್ಲಾ ಕ್ಷಮಿಸಿದ್ದಕ್ಕಾಗಿ ನಿನಗೆ ಸ್ತೊತ್ರ. ಯೇಸು ಕ್ರಿಸ್ತನ ಪವಿತ್ರ ರಕ್ತ ನನ್ನನ್ನು ತೊಳೆದಿರುವದಕ್ಕಾಗಿ ನಿನಗೆ ಸ್ತೋತ್ರ. ಪೂರ್ವಕ್ಕೂ ಪಶ್ಚಿಮಕ್ಕೂ ಎಷ್ಟು ದೂರವೋ ನನ್ನ ಪಾಪಗಳನ್ನು ಅಷ್ಟು ದೂರ ಮಾಡಿದ್ದಕ್ಕಾಗಿ ನಿನಗೆ ಸ್ತೋತ್ರ ಎಂದು ಹೇಳಿ ಕರ್ತನನ್ನು ಸ್ತುತಿಸಿರಿ.

ಇನ್ನು ಮೇಲೆ ನೀವು ಹಳೆಯ ಪಾಪಗಳನ್ನು ಮತ್ತೆ ಮತ್ತೆ ಹೇಳಿ ಪ್ರಾರ್ಥಿಸಬೇಕಾದ ಅಗತ್ಯವಿಲ್ಲ. ಒಬ್ಬ ಪುಟ್ಟ ಬಾಲಕಿ ಮನೆಯಲ್ಲಿ ಆಟವಾಡುತ್ತಿರುವಾಗ ಮೇಜಿನ ಮೇಲೆ ಇಟ್ಟಿದ್ದ ಒಂದು ಗಾಜಿನ ಪಾತ್ರೆಯನ್ನು ಒಡೆದುಹಾಕಿದಳು. ಮನೆಯಲ್ಲಿ ಯಾರೂ ಅದನ್ನು ನೋಡಲಿಲ್ಲ. ಯಾರಿಗೂ ತಿಳಿಯದೆ ಅಲ್ಲಿಂದ ಓಡಿ ಹೋಗೋಣವೆಂದು ಭಾವಿಸಿದಳು.

ಅಯ್ಯೋ! ಹಾಗೆ ಮಾಡುವದು ತಪ್ಪು. ಈ ಕೆಲಸ ಮಾಡಿದ್ದು ನಾನೇ ಎಂದು ತಿಳಿದರೆ ಅಮ್ಮಾ ನನ್ನನ್ನು ಶಿಕ್ಷಿಸುತ್ತಾರೆ. ಅದಕ್ಕೆ ಬದಲಾಗಿ ನಾನೇ ತಪ್ಪೊಪ್ಪಿಕೊಳ್ಳೋಣವೆಂದು ಮುರಿದುಹೋದ ಗಾಜಿನ ಚೂರುಗಳನ್ನು ತೆಗೆದುಕೊಂಡು ಅಮ್ಮನ ಬಳಿಗೆ ಬಂದಳು.

ಅಮ್ಮಾ, ನಾನು ಇದನ್ನು ತಿಳಿಯದೆ ಒಡೆದುಹಾಕಿದೆನು, ನನ್ನನ್ನು ಕ್ಷಮಿಸು ಎಂದು ಕಣ್ಣೀರಿನಿಂದ ಹೇಳಿದಳು.

ಮಗಳು ತನ್ನ ತಪ್ಪನ್ನು ಗ್ರಹಿಸಿ ಮನಸಾಂತರ ಹೊಂದಿ ಬಂದಿದ್ದರಿಂದ ತಾಯಿ ಸಂತೋಷಗೊಂಡು ಮುರಿದು ಹೋದ ಆ ಗಾಜಿನ ಚೂರುಗಳನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಮಗಳೇ, ನಿನ್ನನ್ನು

ಕ್ಷಮಿಸಿದ್ದೇನೆ. ಇನ್ನು ಮೇಲೆ ಇಂತಾ ತಪ್ಪು ಮಾಡದಂತೆ ಜಾಗರೂಕವಾಗಿರು ಎಂದು ಸಂತೋಷವಾಗಿ ಹೇಳಿದಳು.

ಮಗಳು ಆಟವಾಡಲು ಹೋದಳು. ಎರಡು ದಿನಗಳ ನಂತರ ಆ ಬಾಲಕಿ ಹೊರಗೆ ಆಟವಾಡುತ್ತಿರುವಾಗ ಅವಳು ಒಡೆದುಹಾಕಿದ ಗಾಜಿನ ಚೂರುಗಳು ಅಲ್ಲಿರುವ ಕಸದ ಬುಟ್ಟಿಯಲ್ಲಿ ಬಿದ್ದಿರುವದನ್ನು ನೋಡಿದಳು.

ಅದನ್ನು ತೆಗೆದುಕೊಂಡು ತಾಯಿಯ ಬಳಿಗೆ ಬಂದು, ಅಮ್ಮಾ ನಾನು ಇದನ್ನು ಎರಡು ದಿನಗಳ ಹಿಂದೆ ಒಡೆದು ಹಾಕಿದೆನಲ್ಲಾ, ನನ್ನನ್ನು ಕ್ಷಮಿಸು ಎಂದು ಮತ್ತೆ ಹೇಳಿದರೆ ಆ ತಾಯಿಗೆ ಹೇಗಿರುತ್ತದೆ?

ಸ್ವಲ್ಪ ಆಲೋಚಿಸಿ ನೋಡಿ. ನಿನ್ನ ತಪ್ಪನ್ನು ಆಗಲೇ ಕ್ಷಮಿಸಿಬಿಟ್ಟೆನಲ್ಲಾ ಕಸದ ಬುಟ್ಟಿಯಲ್ಲಿರುವ ಇದನ್ನು ಯಾಕೆ ಮತ್ತೆ ತೆಗೆದುಕೊಂಡು ಬಂದಿರುವೆ ಎಂದು ದುಃಖಗೊಂಡಿರಬಹುದು.

ಒಬ್ಬ ತಾಯಿಗಿಂದ ಹೆಚ್ಚಾಗಿ ನಮ್ಮ ಮೇಲೆ ಪ್ರೀತಿಯನ್ನಿಟ್ಟಿರುವ ಕರ್ತನಾದ ಯೇಸು ಕ್ರಿಸ್ತನು ನಮ್ಮನ್ನು ಕುರಿತು ದುಃಖಿಸುತ್ತಾನೆ.


ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ. ಕರ್ತನು ನಿಮ್ಮ ಹಳೆಯ ಪಾಪಗಳನ್ನು ಕ್ಷಮಿಸಿ ಮರೆತುಬಿಟ್ಟಿದ್ದಾನೆ. ಇನ್ನು ಅವುಗಳನ್ನು ಆತನು ನೆನಪಿಸಿಕೊಳ್ಳುವದಿಲ್ಲ. ಅದನ್ನು ಸಮುದ್ರದ ಆಳದಲ್ಲಿ ಹಾಕಿಬಿಟ್ಟಿದ್ದಾನೆ. **(ಮೀಕಾ 7:19).**

ಇನ್ನು ಮುಂದೆ ಆ ಪಾಪಗಳನ್ನು ಹೇಳಿ ಪ್ರಾರ್ಥಿಸಬೇಡಿರಿ. ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟಿರುವದಕ್ಕಾಗಿ ಆತನನ್ನು ಸ್ತುತಿಸಿರಿ.

ಯೇಸು ಕ್ರಿಸ್ತನು ನಿಮ್ಮಲ್ಲಿ ಬಂದಿದ್ದಾನೆ. ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟಿರುವದು ಮಾತ್ರವಲ್ಲ ಈಗ ಯೇಸು ಕ್ರಿಸ್ತನು ನಿಮ್ಮ ಹೃದಯದಲ್ಲಿ ಬಂದಿದ್ದಾನೆ. ಎಷ್ಟು ಸಂತೋಷ! ಆಕಾಶವನ್ನು ಭೂಮಿಯನ್ನು ಉಂಟುಮಾಡಿದ ಕರ್ತನು ಈಗ ನಿಮ್ಮಲ್ಲಿ ಪ್ರವೇಶಿಸಿದ್ದಾನೆ. ಇದನ್ನು ನಂಬಿರಿ.

**"ಇಗೋ, ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ; ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು..." (ಪ್ರಕಟನೆ 3:20)** ಎಂದು ಹೇಳಿದ ಯೇಸು ಕ್ರಿಸ್ತನು

ಈಗ ನಿಮ್ಮ ಹೃದಯದೊಳಗೆ ಬಂದಿದ್ದಾನೆ.




ಸೇವಕರು ಪ್ರಸಂಗ ಮಾಡಿದಾಗ ಅವರ ಮೂಲಕ ಯೇಸು ಕ್ರಿಸ್ತನು ನಿಮ್ಮ ಹೃದಯದ ಬಾಗಿಲನ್ನು ತಟ್ಟಿದನು.

ನೀವು ಆ ಶಬ್ದವನ್ನು ಕೇಳಿ ಮಾನಸಾಂತರ ಹೊಂದಿ ಯೇಸುವೇ ನನ್ನ ಹೃದಯದೊಳಕ್ಕೆ ಬಾ ಎಂದು ಪ್ರಾರ್ಥಿಸಿದಾಗ, ನಮ್ಮ ಹೃದಯದ ಬಾಗಿಲನ್ನು ಯೇಸು ಕ್ರಿಸ್ತನಿಗೋಸ್ಕರ ತೆರೆದಿರಿ.

ಯೇಸು ಕ್ರಿಸ್ತನು ನಿಮ್ಮ ಆಹ್ವಾನವನ್ನು ಅಂಗೀಕರಿಸಿ ನಿಮ್ಮ ಹೃದಯದಲ್ಲಿ ಪ್ರವೇಶಿಸಿದನು.

ಇದನ್ನು ನಂಬಿ ಸಂತೋಷದಿಂದ ಯೇಸು ಕ್ರಿಸ್ತನನ್ನು ಸ್ತುತಿಸಿರಿ. ಯೇಸುವೇ ನನ್ನ ಹೃದಯದೊಳಗೆ ಪ್ರವೇಶಿಸಿದ್ದಕ್ಕಾಗಿ ನಿನಗೆ ಸ್ತೋತ್ರ. ನನ್ನೊಂದಿಗೆ ಇರುವದಕ್ಕಾಗಿ ನಿನಗೆ ಸ್ತೋತ್ರ ಎಂದು ಆತನನ್ನು ಸ್ತುತಿಸಿರಿ.

## ಈಗ
## ನೀವು ದೇವರ ಮಕ್ಕಳು!

ನೀವು ದೇವರ ಮಕ್ಕಳಾಗಿದ್ದೀರಿ. **"ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರಕೊಟ್ಟನು." (ಯೋಹಾನ 1:12).** ಎಂದು ಸತ್ಯವೇದ ವಾಕ್ಯಕ್ಕನುಸಾರವಾಗಿ ಯೇಸುವನ್ನು ನಂಬಿ ಆತನನ್ನು ಅಂಗೀಕರಿಸಿದ ನೀವು ಈಗ, ದೇವರ ಮಗುವಾಗಿದ್ದೀರಿ.

ಇದನ್ನು ನಂಬಿ ಆತನನ್ನು ಸ್ತುತಿಸಿರಿ. ದೇವರ ಮಗುವಾಗಿರುವದು ಎಷ್ಟು ದೊಡ್ಡ ಭಾಗ್ಯ. ಹಿಂದೆ ನೀವು ಸೈತಾನನ ಮಕ್ಕಳಾಗಿದ್ದಿರಿ. ಈಗ ದೇವರ ಮಗುವಾಗಿ ಮಾರ್ಪಟ್ಟಿದ್ದೀರಿ.

ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದ ದೇವರನ್ನು ಅಪ್ಪಾ ತಂದೆಯೇ ಎಂಬ ಅಧಿಕಾರದಿಂದ ಕರೆಯುವ ಭಾಗ್ಯವನ್ನು ಹೊಂದಿಕೊಂಡಿದ್ದೀರಿ.

ಕರ್ತನೇ, ನನ್ನನ್ನು ನಿನ್ನ ಮಗುವಾಗಿ ಮಾಡಿಕೊಂಡಿರುವದಕ್ಕಾಗಿ ನಿನಗೆ ಸ್ತೋತ್ರ ಎಂದು ಹೇಳಿ ಆತನನ್ನು ಸ್ತುತಿಸಿರಿ.

## ನಂಬಿರಿ!

ಮಾನಸಾಂತರ ಹೊಂದುವದು, ಪಾಪ ಕ್ಷಮಾಪಣೆ ಹೊಂದುವದು, ರಕ್ಷಣೆ, ಮತ್ತೆ ಹುಟ್ಟುವದು, ದೇವರ ಮಗುವಾಗಿ ಮಾರ್ಪಡುವದು, ಯೇಸುವನ್ನು ಅಂಗೀಕರಿಸುವದು... ಇವೆಲ್ಲಾ ಒಂದೇ ರೀತಿಯ ಅನುಭವವನ್ನು ಸೂಚಿಸುತ್ತವೆ. ಈ ಅನುಭವವನ್ನು ಈಗ ನೀವು ಹೊಂದಿಕೊಂಡಿದ್ದೀರಿ.

ನಿಮ್ಮ ನಂಬಿಕೆಯಿಂದಲೇ ಈ ಅನುಭವವನ್ನು ದೃಢಪಡಿಸಿಕೊಳ್ಳಬೇಕು.

**"ನಾವೆಲ್ಲರೂ ಪೂರ್ವದಲ್ಲಿ ಅವಿಧೇಯರಾಗಿದ್ದು ಶರೀರಭಾವದ ಆಶೆಗಳಿಗೆ ಅಧೀನರಾಗಿ ಶರೀರಕ್ಕೂ ಮನಸ್ಸಿಗೂ ಸಂಬಂಧಪಟ್ಟ ಇಚ್ಛೆಗಳನ್ನು ನೆರವೇರಿಸುತ್ತಾ ನಡೆದು ಮಿಕ್ಕಾದವರಂತೆ ಸ್ವಭಾವಸಿದ್ಧವಾಗಿ ದೇವರ ಕೋಪಕ್ಕೆ ಗುರಿಯಾಗಿದ್ದೆವು.**

**ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮ ಮೇಲೆ ಮಹಾ ಪ್ರೀತಿಯನ್ನಿಟ್ಟು ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು (ಕೃಪೆಯಿಂದಲೇ ರಕ್ಷಣೆಹೊಂದಿದವರಾಗಿದ್ದೀರಿ).**

**ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ." (ಎಫೆಸ 2:3,4,5,8).**

ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದು ನಂಬಬೇಕು. ಈಗ ಯೇಸು ಕ್ರಿಸ್ತನು ನಿಮ್ಮ ಹೃದಯದಲ್ಲಿದ್ದಾನೆಂದು ನಂಬಿರಿ.

ಈಗ ನೀವು ದೇವರ ಮಗು ಎಂದು ನಂಬಿರಿ. ನೀವು ನಂಬಿ ಕರ್ತನನ್ನು ಸ್ತುತಿಸಿದಾಗ ರಕ್ಷಣೆಯ ಆನಂದವು ನಿಮ್ಮ ಹೃದಯದಲ್ಲಿ ತುಂಬಿರುವದನ್ನು ಅನುಭವಿಸುವಿರಿ.

ಇನ್ನು ಮೇಲೆ ಯಾರಾದರೂ ನಿಮ್ಮನ್ನು, 'ನೀವು ರಕ್ಷಣೆ ಹೊಂದಿದ್ದೀರೇ?' ಎಂದು ಕೇಳಿದರೆ, ಹೌದು ನಾನು ರಕ್ಷಣೆ ಹೊಂದಿದ್ದೇನೆ ಯೇಸು ಕ್ರಿಸ್ತನು ನನ್ನ ಪಾಪಗಳನ್ನು ಕ್ಷಮಿಸಿದ್ದಾನೆಂದು ಧೈರ್ಯವಾಗಿ ಹೇಳಿರಿ. ನಿಮ್ಮ ರಕ್ಷಣೆಯ ಅನುಭವವನ್ನು ಸಂದೇಹಿಸಬೇಡಿರಿ.

ಇನ್ನು ಮುಂದೆ ಪ್ರಾರ್ಥನಾ ಕೂಟಗಳಲ್ಲಿ ರಕ್ಷಣೆಯ ಅನುಭವಕ್ಕಾಗಿ ಕರೆ ನೀಡಿದಾಗ, ನಿಮ್ಮ ಕೈಗಳನ್ನು ಎತ್ತಬೇಡಿರಿ. ಯೇಸುವನ್ನು ಅಂಗೀಕರಿಸಲು ಮುಂದೆ ಬನ್ನಿ ಎಂದು ಹೇಳಿದಾಗ, ಮುಂದಕ್ಕೆ ಹೋಗಬೇಡಿರಿ,

ನೀವು ಈಗಾಗಲೆ ಯೇಸುವನ್ನು ಅಂಗೀಕರಿಸಿದ್ದೀರಿ. ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ. ಈಗ ಯೇಸು ಕ್ರಿಸ್ತನು ನಿಮ್ಮೊಂದಿಗೆ ಇದ್ದಾನೆ. ಆದರೆ ನೀವು ಮುಂದಕ್ಕೆ ಹೋಗಬೇಕಾಗಿಲ್ಲ, ಅದಕ್ಕೆ ಬದಲಾಗಿ ರಕ್ಷಣೆ ಹೊಂದದೆ ಇರುವ ಇತರರಿಗಾಗಿ ಪ್ರಾರ್ಥಿಸಿರಿ.

ರಕ್ಷಣೆ ಎಂಬದು ಒಂದು ಸಲ ಮಾತ್ರ. ಪ್ರತೀ ಕೂಟದಲ್ಲೂ ರಕ್ಷಣೆ ಹೊಂದಬೇಕಾದ ಅಗತ್ಯವಿಲ್ಲ. ಈ ಲೋಕದಲ್ಲಿ ಹುಟ್ಟುವದು ಹೇಗೆ ಒಂದು ಸಲ ಮಾತ್ರವೋ, ಅದೇ ರೀತಿ ಕ್ರಿಸ್ತನಲ್ಲಿ ಮತ್ತೆ ಹುಟ್ಟುವದು ಸಹ ಒಂದೇ ಸಲ.

ಆದರೆ ನಾವು ಹೊಂದಿಕೊಂಡ ಪಾಪಕ್ಷಮಾಪಣೆ ಹಾಗು ರಕ್ಷಣೆಯನ್ನು ಕಾಪಾಡಿಕೊಳ್ಳಲು ನಾವು ಕ್ರಿಯೆ ಮಾಡಬೇಕು.

# ಇನ್ನು ಮುಂದೆ ಏನು ಮಾಡಬೇಕು?



## ಇನ್ನು ಮುಂದೆ ಪಾಪಮಾಡಬೇಡಿ!

ಪಾಪದಲ್ಲಿ ಸಿಕ್ಕಿದ ಒಬ್ಬ ಸ್ತ್ರೀಯನ್ನು ಯೇಸು ಕ್ರಿಸ್ತನ ಬಳಿಗೆ ಕರೆದುಕೊಂಡು ಬಂದರು. ಅವಳು, ತನ್ನ ಪಾಪಕ್ಕಾಗಿ ಮಾನಸಾಂತರ ಹೊಂದಿದಳು.

ಯೇಸು ಕ್ರಿಸ್ತನು ಅವಳ ಪಾಪಗಳನ್ನು ಕ್ಷಮಿಸಿ ಅವಳಿಗೆ ಹೀಗೆ ಹೇಳಿದನು, **"...ಹೋಗು ಇನ್ನು ಮೇಲೆ ಪಾಪ ಮಾಡಬೇಡ" (ಯೋಹಾನ 8:11).** ಯೇಸು ಕ್ರಿಸ್ತನು ನಿಮ್ಮ ಪಾಪಗಳನ್ನು ಕ್ಷಮಿಸಿದನು.

ಇನ್ನು ಪಾಪ ಮಾಡದಂತೆ ನಿಮ್ಮನ್ನು ಕಾಪಾಡಿಕೊಳ್ಳುವದರಲ್ಲಿ ಜಾಗರೂಕರಾಗಿರಿ. ಪಾಪದ ಸಂಪರ್ಕಗಳನ್ನು ದೂರಮಾಡಿಕೊಳ್ಳಿ. ನಿಮ್ಮ ಸ್ನೇಹಿತರು ನಿಮ್ಮನ್ನು ಪಾಪಕ್ಕೆ ಪ್ರೇರೇಪಿಸುವದಾದರೆ ಅಂತಾ ಸ್ನೇಹಿತರನ್ನು ಬಿಟ್ಟು ದೂರಹೋಗಿರಿ. ಯೇಸು ಕ್ರಿಸ್ತನು ನಿಮಗೆ ಒಳ್ಳೆಯ ಸ್ನೇಹಿತನಾಗಿರುತ್ತಾನೆ. ನೀವು ಹೊಂದಿಕೊಂಡ ಅಮೂಲ್ಯವಾದ ರಕ್ಷಣೆಯನ್ನು ಕಾಪಾಡಿಕೊಳ್ಳುವದರಲ್ಲಿ ಜಾಗರೂಕರಾಗಿರಿ.

ಒಬ್ಬ ಬಡ ಯುವಕ ಹಾಗು ಒಬ್ಬ ಶ್ರೀಮಂತ ಯುವಕ ಇಬ್ಬರೂ ಸ್ನೇಹಿತರಾಗಿದ್ದರು. ಒಂದು ದಿನ ಈ ಶ್ರೀಮಂತ ಹುಡುಗ ಬಡ ಹುಡುಗನನ್ನು ಜೂಜಾಡುವದಕ್ಕೆ ಕರೆದುಕೊಂಡು ಹೋದನು.

ಅಕಸ್ಮಾತ್ತಾಗಿ ಅಲ್ಲಿಗೆ ಪೊಲೀಸರು ಬಂದು ಅವರಿಬ್ಬರನ್ನು ಬಂಧಿಸಿ ನ್ಯಾಯಾಲಯಕ್ಕೆ ಕರೆದುಕೊಂಡು ಹೋದರು.



ಅಲ್ಲಿ ಅವರಿಗೆ 1,000/- ರೂಪಾಯಿ ದಂಡ ಹಾಕಿ ಹಣವನ್ನು ಸಲ್ಲಿಸಬೇಕೆಂದು ತೀರ್ಪು ನೀಡಲಾಯಿತು. ಶ್ರೀಮಂತ ಯುವಕನ ತಂದೆ ಬಂದು ಸಾವಿರ ರೂಪಾಯಿ ದಂಡ ಸಲ್ಲಿಸಿ ಮಗನನ್ನು ಬಿಡಿಸಿಕೊಂಡು ಹೋದನು. ಆದರೆ ಬಡ ಯುವಕ ಸೆರೆಯಲ್ಲೇ ಇದ್ದನು. ಅವನ ತಾಯಿ ಒಬ್ಬ ಬಡ ವಿಧವೆ. ಮನೆಗೆಲಸ ಮಾಡಿ ಮಗನನ್ನು ಓದಿಸುತ್ತಿದ್ದಳು.

ಸಾವಿರ ರೂಪಾಯಿ ಎಂಬದು ಆ ಬಡ ವಿಧವೆಗೆ ಒಂದು ದೊಡ್ಡ ವಿಷಯವಾಗಿತ್ತು. ಏಕೆಂದರೆ ತನ್ನ ಮಗನನ್ನು ಬಿಡಿಸಿಕೊಳ್ಳಬೇಕೆಂಬದಕ್ಕಾಗಿ ಕಲ್ಲು ಒಡೆಯುವ ಕಷ್ಟಕರವಾದ ಕೆಲಸಕ್ಕೆ ಹೋದಳು. ಹಗಲು ರಾತ್ರಿ ಕೆಲಸ ಮಾಡಿ ಸಾವಿರ ರೂಪಾಯಿ ಕೂಡಿಟ್ಟು ಮಗನನ್ನು ಬಿಡಿಸಿಕೊಳ್ಳುವದಕ್ಕೆ ಬಂದಳು.

ಬಿಡುಗಡೆಯಾಗಿ ಮನೆಗೆ ಬಂದ ಮಗ ಅಮ್ಮನ ಕೈಗಳನ್ನು ನೋಡಿದನು. ಅವುಗಳಲ್ಲಿ ಗಾಯಗಳನ್ನು ನೋಡಿದನು. ಕಾಲುಗಳನ್ನು ನೋಡಿದನು. ಕಾಲುಗಳಲ್ಲೂ ಗಾಯಗಳಿದ್ದವು. ದೇಹವೆಲ್ಲಾ ಕ್ಷೀಣಿಸಿಹೋಗಿತ್ತು. ಈ ಗಾಯಗಳೆಲ್ಲಾ ಹೇಗೆ ಉಂಟಾದವು ಎಂದು ಕೇಳಿದನು.

ನಿನಗೋಸ್ಕರವೇ ಮಗಾ. ನಿನ್ನನ್ನು ಬಿಡಿಸಿಕೊಳ್ಳುವದಕ್ಕೆ ಹಗಲು ರಾತ್ರಿ ಕಠಿಣವಾಗಿ ಕೆಲಸ ಮಾಡಿದೆನು. ಇವೆಲ್ಲಾ ಆಗ ಉಂಟಾದ ಗಾಯಗಳೆಂದು ತಾಯಿ ಸಂತೋಷವಾಗಿ ಹೇಳಿದಳು. ಗಾಯಗೊಂಡ ತಾಯಿಯ ಕೈಗಳನ್ನು ಹಿಡಿದುಕೊಂಡು ಇನ್ನು ತಪ್ಪು ಮಾಡುವದಿಲ್ಲ ಎಂದು ಹೇಳಿ ಅತ್ತನು.

ಕೆಲವು ದಿನಗಳ ನಂತರ ಶ್ರೀಮಂತ ಸ್ನೇಹಿತನು ಇವನನ್ನು ನೋಡಲು ಬಂದನು. ಮತ್ತೆ ಜೂಜಾಟ ಆಡಲು ಹೋಗೋಣ ಬಾ ಎಂದು ಕರೆದನು. ಆದರೆ ಬಡ ಯುವಕ ಬರುವದಿಲ್ಲ ಎಂದು ಹೇಳಿ ನಿರಾಕರಿಸಿದನು. ಅದಕ್ಕೆ ಶ್ರೀಮಂತ ಯುವಕ, ಪೊಲೀಸರು

ಹಿಡಿದುಕೊಂಡು ಹೋಗುತ್ತಾರೆಂದು ಭಯವೇ? ಹಾಗೊಂದು ವೇಳೆ ನಡೆದರೂ ಹಣ ಕೊಟ್ಟು ಬಿಡುಗಡೆಯಾಗಿ ಬರಬಹುದು ಹೆದರಬೇಡ ಎಂದು ಹೇಳಿದನು.

ಅದಕ್ಕೆ ಬಡ ಯುವಕನು, ನಿನಗೆ ಬಿಡುಗಡೆ ಸುಲಭವಾಗಿ ದೊರೆಯಿತು. ಆದರೆ ನನಗೆ ಉಂಟಾದ ಬಿಡುಗಡೆ ನನ್ನ ಅಮ್ಮನ ಗಾಯಗಳಿಂದ ಉಂಟಾಯಿತು. ಅವರು ನನಗೋಸ್ಕರ ಸುರಿಸಿದ ರಕ್ತದ ನಿಮಿತ್ತ ಉಂಟಾಯಿತು. ನಾನು ಮತ್ತೊಮ್ಮೆ ನನ್ನ ತಾಯಿಯನ್ನು ಗಾಯಗೊಳಿಸಲು ಬಯಸುವದಿಲ್ಲ ಎಂದು ಹೇಳಿ ಅಲ್ಲಿಂದ ಹೊರಟು ಹೋದನು. ನಿಮಗೆ ದೊರೆತ ಪಾಪ ಕ್ಷಮಾಪಣೆ ಬಿಡುಗಡೆ ಸಾಧಾರಣವಾದದ್ದಲ್ಲ. ಯೇಸು ಕ್ರಿಸ್ತನು ನಿಮಗೋಸ್ಕರ ಶಿಲುಬೆಯಲ್ಲಿ ಮೊಳೆಗಳಿಂದ ಹೊಡೆಯಲ್ಪಟ್ಟು ತೂಗಿದನು. ತನ್ನ ಪವಿತ್ರ ರಕ್ತವನ್ನು ಸುರಿಸಿದನು. ಆತನು ಅನುಭವಿಸಿದ ಸಂಕಷ್ಟಗಳಿಂದ ಉಂಟಾದ ರಕ್ಷಣೆಯನ್ನು ಕಾಪಾಡಿಕೊಳ್ಳಿರಿ. ಆತನ ಪ್ರೀತಿಯನ್ನು ಮರೆಯದಿರಿ. ಮತ್ತೆ ಪಾಪ ಮಾಡಿ ಆತನನ್ನು ವೇದನೆಗೊಳಿಸಬೇಡಿರಿ.

**"ವಿಗ್ರಹಕ್ಕೆ ನೈವೇದ್ಯಮಾಡಿದ್ದನ್ನೂ ಹಾದರವನ್ನೂ ಕುತ್ತಿಗೆ ಹಿಸುಕಿ ಕೊಂದದ್ದನ್ನೂ ರಕ್ತವನ್ನೂ ವಿಸರ್ಜಿಸಬೇಕೆಂದು..." (ಅಪೊಸ್ತಲ 15:20).** ವಿಗ್ರಹಗಳಿಗೆ ನೈವೇದ್ಯ ಮಾಡಿದ್ದನ್ನು ತಿನ್ನಬೇಡಿರಿ. ಇನ್ನು ಮೇಲೆ ವಿಗ್ರಹಗಳಿಗೂ ನಿಮಗೂ ಸಂಬಂಧವಿಲ್ಲ. ನೀವು ಅಂಗೀಕರಿಸಿದ ಯೇಸು ಕ್ರಿಸ್ತನು ಮಾತನಾಡಲಾರದ, ನೋಡಲಾದ ವಿಗ್ರಹವಲ್ಲ. ಆತನು ನಿಮ್ಮ ಆಂತರ್ಯದಲ್ಲಿ ವಾಸ ಮಾಡುವ ಸಜೀವನಾದ ದೇವರು.

ನಿಮ್ಮ ದೇಹ ಕರ್ತನಾದ ಯೇಸು ಕ್ರಿಸ್ತನು ವಾಸಮಾಡುವ ದೇವಾಲಯವಾಗಿದೆ. ಆದ್ದರಿಂದ ಹಾದರಕ್ಕೆ ದೂರವಾಗಿರಿ. ಯಾವ ಮೃಗದ, ಪಕ್ಷಿಯ ರಕ್ತವನ್ನು ಸಹ ತಿನ್ನಬೇಡಿರಿ.

**"ಆದರೆ ರಕ್ತದಿಂದ ಕೂಡಿರುವ ಮಾಂಸವನ್ನು ನೀವು ತಿನ್ನಬಾರದು;" (ಆದಿ 9:4)** ಎಂದು ಕರ್ತನು ಹೇಳುತ್ತಿದ್ದಾನೆ. ರಕ್ತದಲ್ಲೇ ಜೀವವಿದೆ. ಒಂದು ಮೃಗ ಕುತ್ತಿಗೆ ಹಿಸುಕಿ ಕೊಲ್ಲಲ್ಪಟ್ಟಾಗ ಅದರ ರಕ್ತ ದೇಹದಲ್ಲಿ ಗಡ್ಡೆ ಕಟ್ಟುತ್ತದೆ. ಆದ್ದರಿಂದ ಅಂತದ್ದನ್ನು ತಿನ್ನಬಾರದು ಎಂದು ಸತ್ಯವೇದ ಹೇಳುತ್ತದೆ.

# ಯೇಸು ಕ್ರಿಸ್ತನನ್ನು
## ಆರಾಧಿಸಿರಿ!



ಕರ್ತನೂ ರಕ್ಷಕನೂ ಆದ ಯೇಸು ಕ್ರಿಸ್ತನೇ ನಿಮ್ಮನ್ನು ರಕ್ಷಿಸಿದನು. ಆತನನ್ನು ಮಾತ್ರವೇ ಆರಾಧಿಸಿ ಸ್ತುತಿಸಬೇಕು. ಯೇಸು ಕ್ರಿಸ್ತನ ಮೇಲೆ ಹೊರತಾಗಿ ಬೇರೆ ಯಾರ ಮೇಲೂ ನಿಮ್ಮ ನಂಬಿಕೆಯನ್ನು ಇಡಬಾರದು. ಯೇಸು ಕ್ರಿಸ್ತನೇ ನಿಜವಾದ ದೇವರು ಆತನು ಮಾತ್ರವೇ ನಮಗೋಸ್ಕರ ಶಿಲುಬೆಯಲ್ಲಿ ಮರಣಿಸಿ ಮೂರನೆಯ ದಿನ ಸಜೀವನಾಗಿ ಎದ್ದಾತನು. ಒಬ್ಬ ಸೇವಕನ ಮೂಲಕ ನೀವು ರಕ್ಷಣೆಗೆ ನಡೆಸಲ್ಪಟ್ಟಿರಬಹುದು. ಆ ಸೇವಕನನ್ನು ಅಲ್ಲ, ಆ ಸೇವಕನ ಮೂಲಕ ನಿಮ್ಮನ್ನು ರಕ್ಷಿಸಿದ ಆ ಯೇಸು ಕ್ರಿಸ್ತನನ್ನು ನೀವು ಮಹಿಮೆಪಡಿಸಬೇಕು.

**"ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು. ಯಾವ ಮೂರ್ತಿಯನ್ನೂ ಮಾಡಿಕೊಳ್ಳಬಾರದು. ಆಕಾಶದಲ್ಲಾಗಲಿ ಭೂಮಿಯಲ್ಲಾಗಲಿ ಭೂಮಿಯ ಕೆಳಗಣ ನೀರಿನಲ್ಲಾಗಲಿ ಇರುವ ಯಾವದರ ರೂಪವನ್ನೂ ಮಾಡಿಕೊಳ್ಳಬಾರದು. ಅವುಗಳಿಗೆ ಅಡ್ಡ ಬೀಳಲೂ ಬಾರದು ಪೂಜೆಮಾಡಲೂ ಬಾರದು." (ವಿಮೋಚನ 20:3,4,5)** ಎಂದು ಕರ್ತನು ಹೇಳುತ್ತಿದ್ದಾನೆ.

# ಸತ್ಯವೇದವನ್ನು ಓದಿ ಪ್ರಾರ್ಥನೆ ಮಾಡಿರಿ!



ಈಗ ನೀವು ದೇವರ ಮಕ್ಕಳು! ನಿಮ್ಮ ತಂದೆಯಾದ ದೇವರ ಬಳಿ ನೀವು ಅನುದಿನ ಮಾತನಾಡಬೇಕು. ಆತನು ಹೇಳುವದನ್ನು ಕೇಳಬೇಕು.

ಪ್ರಾರ್ಥನೆಯ ಮೂಲಕ ನೀವು ಆತನೊಂದಿಗೆ ಮಾತನಾಡಬಹುದು. ಸತ್ಯವೇದವನ್ನು ಓದುವದರ ಮೂಲಕ ಆತನು ನಿಮ್ಮೊಂದಿಗೆ ಮಾತನಾಡುವದನ್ನು ಕೇಳಬಹುದು.

ಅನುದಿನ ಕನಿಷ್ಟಪಕ್ಷ ಒಂದು ಗಂಟೆ ಹೊತ್ತಾದರೂ ವೈಯಕ್ತಿಕವಾಗಿ ಸತ್ಯವೇದವನ್ನು ಓದಿ ಪ್ರಾರ್ಥನೆ ಮಾಡಿರಿ. ಮುಂಜಾನೆ ಎದ್ದು ಮೊಟ್ಟ ಮೊದಲು ಕರ್ತನೊಂದಿಗೆ ಮಾತನಾಡಿರಿ. ಬೆಳಗ್ಗೆ ಒಂದು ಗಂಟೆ ಹೊತ್ತು ಪ್ರಾರ್ಥನೆ ಮಾಡಲು ಒಂದು ವೇಳೆ ಸಾಧ್ಯವಾಗದಿದ್ದರೆ, ಬೆಳಗ್ಗೆ ಅರ್ಧ ಗಂಟೆ ಸಂಜೆ ಅರ್ಧ ಗಂಟೆ ಕರ್ತನ ಪಾದದಲ್ಲಿ ಕಾದಿರ್ರಿ.

ಮೊಟ್ಟ ಮೊದಲು ಸತ್ಯವೇದವನ್ನು ಓದಿ ಧ್ಯಾನಿಸಿರಿ. ನಿಮ್ಮ ಬಳಿ ಸತ್ಯವೇದ ಇಲ್ಲದಿದ್ದರೆ ಒಂದು ಸತ್ಯವೇದವನ್ನು ಕೊಂಡುಕೊಳ್ಳಿರಿ. ಮೊದಲು ಹೊಸ ಒಡಂಬಡಿಕೆಯನ್ನು ಓದಿ ಧ್ಯಾನಿಸಿರಿ. ಸತ್ಯವೇದ ದೇವರ ವಾಕ್ಯ ಅದನ್ನು ಪ್ರಾರ್ಥನಾ ಪೂರ್ವಕವಾಗಿ ಓದಿರಿ. ಸಾಧ್ಯವಾದರೆ ಮೊಣಕಾಲೂರಿ ಓದಿರಿ. ಅದರ ಮೂಲಕ ಕರ್ತನು ನಿಮ್ಮೊಂದಿಗೆ ಮಾತನಾಡುವನು.

ವಾಕ್ಯವನ್ನು ಧ್ಯಾನಿಸಿದ ನಂತರ ಪ್ರಾರ್ಥಿಸಿರಿ. ಕರ್ತನು ನಿಮ್ಮನ್ನು ರಕ್ಷಿಸಿ ತನ್ನ ಮಗುವಾಗಿ ಮಾಡಿಕೊಂಡದ್ದಕ್ಕಾಗಿ ಆತನನ್ನು ಸ್ತುತಿಸಿರಿ. ಇಡೀ

ದಿನ ನಾನು ಪಾಪ ಮಾಡದಂತೆ ಕಾಪಾಡುವಂತೆ ಪ್ರಾರ್ಥಿಸಿರಿ. ರಕ್ಷಣೆ ಹೊಂದದೆ ಇರುವ ನಿಮ್ಮ ಕುಟುಂಬ ಸದಸ್ಯರು ರಕ್ಷಣೆ ಹೊಂದುವಂತೆ ಪ್ರಾರ್ಥಿಸಿರಿ. ನಿಮ್ಮ ಸ್ನೇಹಿತರು, ಬಂಧುಗಳೆಲ್ಲಾ ರಕ್ಷಣೆ ಹೊಂದುವಂತೆ ಪ್ರಾರ್ಥಿಸಿರಿ. ನಿಮ್ಮ ಕುಟುಂಬಕ್ಕಾಗಿ ಪ್ರಾರ್ಥಿಸಿರಿ. ಯೇಸು ಕ್ರಿಸ್ತನು ನಿಮ್ಮ ಪ್ರಾರ್ಥನೆಯ ಮೂಲಕ ನೀವು ಅದ್ಭುತಗಳನ್ನು ನೋಡುವಂತೆ ಮಾಡುವನು. ರಾತ್ರಿ ಪ್ರಾರ್ಥಿಸುವಾಗ ನಿಮ್ಮ ಹೃದಯವನ್ನು ಪರೀಕ್ಷೆ ಮಾಡಿಕೊಂಡು ಸಮರ್ಪಿಸಿಕೊಂಡು ಪ್ರಾರ್ಥನೆ ಮಾಡಿರಿ.

ಆ ದಿನ ಯಾವುದಾದರು ತಪ್ಪುಗಳು ಪಾಪಗಳನ್ನು ಮಾಡಿದ್ದರೆ ಪವಿತ್ರಾತ್ಮನು ಅದರ ಅರುಹನ್ನು ಉಂಟುಮಾಡಿದರೆ ಅದನ್ನು ಒಪ್ಪಿಕೊಂಡು ಪ್ರಾರ್ಥಿಸಿರಿ.

**"ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು" (1 ಯೋಹಾನ 1:9).**

ಹಿಂದೆ ನೀವು ಯಾವ ಪಾಪ ಮಾಡಿದರೂ ಅದು ನಿಮ್ಮ ಹೃದಯವನ್ನು ಹೆಚ್ಚಾಗಿ ಬಾಧಿಸುತ್ತಿರಲಿಲ್ಲ. ಯಾಕಂದರೆ ಹಿಂದೆ ನೀವು ಪಾಪದಲ್ಲೇ ಜೀವಿಸುತ್ತಿದ್ದಿರಿ. ಆದರೆ ಈಗ ಒಂದು ಚಿಕ್ಕ ಪಾಪ ಮಾಡಿದರೂ ಅದು ನಿಮ್ಮ ಸಮಾಧಾನವನ್ನು ಹಾಳುಮಾಡುತ್ತದೆ. ಒಂದು ಚಿಕ್ಕ ಕೋಪ, ಚಿಕ್ಕ ಸುಳ್ಳು ನಿಮ್ಮ ಆಂತರ್ಯವನ್ನು ಬಾಧಿಸುತ್ತದೆ. ಅಯ್ಯೋ ನಾನು ಈ ತಪ್ಪು ಮಾಡಿಬಿಟ್ಟೆನಲ್ಲಾ ಎಂಬ ವೇದನೆ ಉಂಟಾಗುತ್ತದೆ. ಯಾಕಂದರೆ ಪವಿತ್ರಾತ್ಮನು ನಿಮ್ಮ ಪಾಪವನ್ನು ಕೂಡಲೆ ತೋರಿಸಿ ಅರುಹು ಉಂಟುಮಾಡುತ್ತಾನೆ.

ಕೂಡಲೆ ನೀವು ಕರ್ತನೇ, ನಾನು ಈ ಪಾಪವನ್ನು ಮಾಡಿಬಿಟ್ಟೆನು. ನನ್ನನ್ನು ಕ್ಷಮಿಸು ಎಂದು ಒಪ್ಪಿಕೊಂಡು ಪ್ರಾರ್ಥಿಸಿರಿ. ಕೂಡಲೆ ಕರ್ತನು ಕ್ಷಮಿಸುತ್ತಾನೆ. ಮತ್ತೆ ಆ ಪಾಪವನ್ನು ಮಾಡದಂತೆ ದೇವರ ಶಕ್ತಿಯನ್ನು ಪ್ರಾರ್ಥನೆಯಲ್ಲಿ ಕೇಳಿರಿ. ಒಂದೇ ದಿನದಲ್ಲಿ ಪೂರ್ಣ ಪರಿಶುದ್ಧತೆ ಉಂಟಾಗುವದಿಲ್ಲ. ಸತ್ಯವೇದವನ್ನು ಓದಿ ಪ್ರಾರ್ಥನೆ ಮಾಡುತ್ತಾ ಮಾಡುತ್ತಾ ಕರ್ತನಲ್ಲಿ ಬೆಳೆಯುತ್ತಿದಂತೆ ಪರಿಶುದ್ಧತೆಯಲ್ಲೂ ಬೆಳೆಯುವಿರಿ.

# ಪವಿತ್ರಾತ್ಮನನ್ನು ಹೊಂದಿಕೊಳ್ಳಿರಿ!



ಪವಿತ್ರಾತ್ಮನ ಮೂಲಕ ನೀವು ರಕ್ಷಣೆ ಹೊಂದಿದಿರಿ. ಸೇವಕರು ಪ್ರಸಂಗ ಮಾಡಿದಾಗ ಪವಿತ್ರಾತ್ಮನು ಅವರ ಮೂಲಕ ನಿಮ್ಮ ಹೃದಯದಲ್ಲಿ ಮಾತನಾಡಿ ನಿಮ್ಮ ಪಾಪದ ಅರುಹನ್ನು ಹುಟ್ಟಿಸಿ ನೀವು ಮಾನಸಾಂತರ ಹೊಂದುವಂತೆ ಮಾಡಿದನು.

**"ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ" (ಎಫೆಸ 1:13).** ನೀವು ರಕ್ಷಣೆಹೊಂದಿದಾಗ, ಪವಿತ್ರಾತ್ಮನ ಮುದ್ರೆಯನ್ನು ಹೊಂದಿದಿರಿ. ಆದರೆ ಈ ಅನುಭವವು ಸಾಲದು. ಪವಿತ್ರಾತ್ಮನ ಶಕ್ತಿಯಿಂದ ತುಂಬಿ ಹೊರಸೂಸುವ ಅನುಭವವನ್ನು ಹೊಂದಿಕೊಳ್ಳಬೇಕು.

ಇದನ್ನೇ ಯೇಸು ಕ್ರಿಸ್ತನು **"ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು. ಆ ಸಹಾಯಕನು ಯಾರಂದರೆ ಸತ್ಯದ ಆತ್ಮನೇ. ಲೋಕವು ಆತನನ್ನು ನೋಡದೆಯೂ ತಿಳಿಯದೆಯೂ ಇರುವದರಿಂದ ಆತನನ್ನು ಹೊಂದಲಾರದು. ನೀವು**

**ಆತನನ್ನು ಬಲ್ಲಿರಿ ಹೇಗಂದರೆ ನಿಮ್ಮ ಬಳಿಯಲ್ಲಿ ವಾಸಮಾಡುತ್ತಾನೆ ಮತ್ತು ನಿಮ್ಮೊಳಗೆ ಇರುವನು." (ಯೋಹಾನ 14:16,17).**

ಈ ಪವಿತ್ರಾತ್ಮನ ಅಭಿಷೇಕವನ್ನು ಹೊಂದಿಕೊಂಡಾಗ ನಾವು ವಿಜಯವಂತವಾದ ಪವಿತ್ರವಾದ ಕ್ರೈಸ್ತರಾಗಿ ಜೀವಿಸಲು ಸಾಧ್ಯ.

ಪವಿತ್ರಾತ್ಮನೇ ಪಾಪವನ್ನು ಜಯಿಸಲು, ಸಮಸ್ಯೆಗಳನ್ನು ಎದುರಿಸಲು, ಸೈತಾನನನ್ನು ಜಯಿಸಲು ಶಕ್ತಿಯನ್ನು ದಯಪಾಲಿಸುವನು.

1972 ನೇ ವರ್ಷ ಕರ್ತನು ನನ್ನನ್ನು ರಕ್ಷಿಸಿದನು. ಆದರೆ ಪವಿತ್ರವಾಗಿ ಜೀವಿಸಲು ಬಹಳ ಕಷ್ಟಪಟ್ಟೆನು. 1974 ನೇ ವರ್ಷ ಕರ್ತನು ನನ್ನನ್ನು ಪವಿತ್ರಾತ್ಮನಿಂದ ಅಭಿಷೇಕಿಸಿದನು. ಅದರ ನಂತರ ವಿಜಯವಂತವಾದ ಜೀವನ ಜೀವಿಸಲು ಸಾಧ್ಯವಾಯಿತು.

ನೀವು ಸಹ ಪವಿತ್ರಾತ್ಮನ ಅಭಿಷೇಕವನ್ನು ಬಯಸಿರಿ. ಅದಕ್ಕಾಗಿ ಪ್ರಾರ್ಥಿಸಿರಿ. ಕರ್ತನು ಅಭಿಷೇಕವನ್ನು ದಯಪಾಲಿಸುವನು.

**"ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ...ನನಗೆ ಸಾಕ್ಷಿಗಳಾಗಿರಬೇಕು ಅಂದನು." (ಅಪೊಸ್ತಲ 1:8)** ಎಂದು ಯೇಸು ಕ್ರಿಸ್ತನು ಹೇಳುತ್ತಿದ್ದಾನೆ.

# ದೇವರ ಮಕ್ಕಳೊಂದಿಗೆ ಸಹವಾಸ ಹೊಂದಿರ್ರಿ!



ಕ್ರೈಸ್ತ ಜೀವನದಲ್ಲಿ ಮುಖ್ಯವಾದದ್ದು ದೇವರ ಮಕ್ಕಳು ಸೇರಿ ಕರ್ತನನ್ನು ಆರಾಧಿಸುವದೇ. ನೀವು ಯಾವ ಸಭೆಗೂ ಹೋಗದಿದ್ದರೆ, ನೀವು ಕರ್ತನಲ್ಲಿ ಬೆಳೆಯಲು ಪ್ರಯೋಜನಕರವಾಗಿರುವ ಸಭೆಯ ಭಾಗವಾಗಿ ದೇವರ ಮಕ್ಕಳೊಂದಿಗೆ ಐಕ್ಯವಾಗಿ ಕರ್ತನನ್ನು ಆರಾಧಿಸಿರಿ. ಸಭೆಯಾಗಿ ಕೂಡಿ ಬರುವದನ್ನು ಬಿಟ್ಟುಬಿಡಬೇಡಿರಿ. ಪವಿತ್ರಾತ್ಮನನ್ನು ಹೊಂದಿಕೊಳ್ಳಿರಿ!

ಭಾನುವಾರ ತಪ್ಪದೆ ಆರಾಧನೆಯಲ್ಲಿ ಭಾಗವಹಿಸಿ ಕರ್ತನನ್ನು ಆರಾಧಿಸಿರಿ. ಆರಾಧನೆಯಲ್ಲಿ ಭಾಗವಹಿಸಿ ಸತ್ಯ ವಾಕ್ಯಗಳನ್ನು ಕೇಳುತ್ತಿದ್ದಂತೆ ಕರ್ತನಲ್ಲಿ ಬೆಳೆಯಲು ಸಾಧ್ಯ. ಕರ್ತನ ವಾಕ್ಯ ಪ್ರಕಟಿಸಲಾಗುತ್ತಿರುವ ಸ್ಥಳಗಳಿಗೆ ಹೋಗಿ ವಾಕ್ಯವನ್ನು ಕೇಳಿರಿ. ದೇವರ ಮಕ್ಕಳು ಸೇರಿ ಪ್ರಾರ್ಥಿಸಿದರೆ ನೀವೂ ಅವರೊಂದಿಗೆ ಐಕ್ಯವಾಗಿ ಸಹವಾಸಹೊಂದಿ ಪ್ರಾರ್ಥಿಸಿರಿ.

ಯಾವ ಸಭೆಗೆ ಸೇರಿದವರಾಗಿದ್ದರೂ ಎಲ್ಲಾ ಕರ್ತನ ಮಕ್ಕಳನ್ನೂ ಪ್ರೀತಿಸಿರಿ ಯಾರನ್ನೂ ಅಲ್ಪವಾಗಿ ಭಾವಿಸದಿರಿ. ಎಲ್ಲಾ ಸೇವಕರನ್ನು ಪ್ರೀತಿಸಿರಿ.

## ಯೇಸು ಕ್ರಿಸ್ತನಿಗೋಸ್ಕರ
## ಏನಾದರೂ ಮಾಡಿರಿ!

ನಿಮ್ಮನ್ನು ಪಾಪದಿಂದ ಶಾಪದಿಂದ ರಕ್ಷಿಸಿದ ಕರ್ತನಾದ ಯೇಸು ಕ್ರಿಸ್ತನಿಗೋಸ್ಕರ ಏನಾದರೂ ಮಾಡುತ್ತಲೇ ಇರ್ರಿ. ಆತನು ನಿಮ್ಮನ್ನು ರಕ್ಷಿಸಿ ನಿಮಗೆ ನೀಡಿದ ಪಾಪ ಕ್ಷಮಾಪಣೆಯ ಸಂತೋಷವನ್ನು ಇತರರಿಗೆ ಹೇಳಿರಿ.

ಸಮಯ ದೊರೆತಾಗೆಲ್ಲಾ ಯೇಸು ಕ್ರಿಸ್ತನು ನಿಮಗೆ ಮಾಡಿದ ಮೇಲುಗಳನ್ನು ಕುರಿತು ಸಾಕ್ಷಿ ಹೇಳಿ ಆತನನ್ನು ಮಹಿಮೆಪಡಿಸಿರಿ. ನಿಮ್ಮ ಕುಟುಂಬ ಸದಸ್ಯರಿಗೂ, ಬಂಧುಗಳಿಗೂ, ಸ್ನೇಹಿತರಿಗೂ ಯೇಸು ಕ್ರಿಸ್ತನು ನಿಮಗೆ ಮಾಡಿದ್ದನ್ನು ಹೇಳಿರಿ.

ಸಮಯ ದೊರೆತಾಗೆಲ್ಲಾ ಸೇವೆ ಮಾಡುವ ಜನರೊಂದಿಗೆ ಸೇರಿ ಯೇಸು ಕ್ರಿಸ್ತನಿಗೆ ಸೇವೆ ಮಾಡಿರಿ. ನಿಮ್ಮ ಕಾಣಿಕೆಗಳ ಮೂಲಕ ಯೇಸು ಕ್ರಿಸ್ತನ ಸೇವೆಗೆ ಬೆಂಬಲ ನೀಡಬಹುದು. ಯಾವುದಾದರು ರೀತಿಯಲ್ಲಿ ಯೇಸು ಕ್ರಿಸ್ತನಿಗೆ ಏನಾದರೂ ಮಾಡುತ್ತಲೇ ಇರ್ರಿ. ಕರ್ತನು ನಿಮ್ಮನ್ನು ಆಶೀರ್ವದಿಸಿ ಹೆಚ್ಚಿಸುವನು.

## ಯೇಸು ಕ್ರಿಸ್ತನಲ್ಲಿ ನೆಲೆಯಾಗಿರ್ರಿ!

**"ಆದರೆ ಕಡೇವರೆಗೂ ತಾಳುವವನು ರಕ್ಷಣೆಹೊಂದುವನು" (ಮತ್ತಾ 24:13)** ಎಂದು ಯೇಸು ಕ್ರಿಸ್ತನು ಹೇಳಿದ್ದಾನೆ. ರಕ್ಷಣೆ ಹೊಂದಿರುವ ನೀವು ಅಂತ್ಯದ ವರೆಗೆ ಯೇಸು ಕ್ರಿಸ್ತನಲ್ಲಿ ನೆಲೆಯಾಗಿರ್ರಿ.

ಕ್ರೈಸ್ತ ಜೀವನ ಎಂಬದು ಮೆತ್ತನೆಯ ಹಾಸಿಗೆಯ ಮೇಲೆ ನಡೆಯುವ ಜೀವನವಲ್ಲ. ಕಲ್ಲು ಮುಳ್ಳುಗಳು ತುಂಬಿದ ಜೀವನ. ಕ್ರೈಸ್ತ ಜೀವನವೆಂದರೆ ಸಂತೋಷ ಸಮಾಧಾನ ಆಶೀರ್ವಾದ ತುಂಬಿದ ಜೀವನವೇ ಹೌದು. ಅದೇ ಸಮಯದಲ್ಲಿ ಸಂಕಷ್ಟಗಳು ತುಂಬಿದ ಜೀವನವೂ ಆಗಿದೆ.

ಸಂಕಷ್ಟಗಳನ್ನು ನೋಡಿ ಹೆದರಬೇಡಿರಿ. ಉಪದ್ರವಗಳನ್ನು ನೋಡಿ ನಿರುತ್ಸಾಹಗೊಳ್ಳಬೇಡಿರಿ. ನಿಮ್ಮನ್ನು ರಕ್ಷಿಸಿದ ಯೇಸು ಕ್ರಿಸ್ತನು ನಿಮ್ಮೊಂದಿಗೆ ಇದ್ದು ನಿಮ್ಮನ್ನು ಕೈಹಿಡಿದು ನಡೆಸುವನು.

ನಿಮ್ಮ ಕುಟುಂಬದಲ್ಲಿ ನಿಂದೆಗಳು ಅವಮಾನಗಳು ಉಂಟಾಗಬಹುದು. ಯೇಸು ಕ್ರಿಸ್ತನನ್ನು ಅಂಗೀಕರಿಸಿದ್ದರಿಂದ ನೀವು ವಾಸಮಾಡುವ ಸ್ಥಳದಲ್ಲಿ, ಕೆಲಸ ಮಾಡುವ ಸ್ಥಳದಲ್ಲಿ, ಉಪದ್ರವಗಳು ಬರಬಹುದು ಆದರೂ ನಿರುತ್ಸಾಹಗೊಳ್ಳದಿರಿ.

**"ಲೋಕದಲ್ಲಿ ನಿಮಗೆ ಸಂಕಟ ಉಂಟು; ಧೈರ್ಯವಾಗಿರಿ, ನಾನು ಲೋಕವನ್ನು ಜಯಿಸಿದ್ದೇನೆ." (ಯೋಹಾನ 16:33)** ಎಂಬ ಯೇಸು ಕ್ರಿಸ್ತನ ಮಾತುಗಳನ್ನು ನೆನಪುಮಾಡಿಕೊಳ್ಳಿರಿ.**"ನಾವು ಬಹುಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕೆಂಬದಾಗಿ..." (ಅಪೊಸ್ತಲ 14:22)** ಎಂದು ದೇವರ ವಾಕ್ಯ ಹೇಳುತ್ತಿದೆ.

ಆದ್ದರಿಂದ ಉಪದ್ರವಗಳನ್ನು ನೋಡಿ ಮುಂದಕ್ಕೆ ಹಾಕಿದ ಹೆಜ್ಜೆಯನ್ನು ಹಿಂದಕ್ಕೆ ತೆಗೆಯಬೇಡಿರಿ. ಯೇಸು ಕ್ರಿಸ್ತನನ್ನು ಬಿಟ್ಟುಬಿಡಬೇಡಿರಿ. ಆತನಲ್ಲಿ ನೆಲೆಯಾಗಿರ್ರಿ. ಆತನಲ್ಲಿ ನೆಲೆಗೊಂಡಿರುವವರೇ ಪರಲೋಕ ಭಾಗ್ಯವನ್ನು ಹೊಂದಲು ಸಾಧ್ಯ.

ಉಪದ್ರವದಲ್ಲೂ ಯೇಸು ಕ್ರಿಸ್ತನು ನಿಮಗೆ ಸಹಾಯ ಮಾಡುವನು. ನಿಮಗೆ ಉಪದ್ರವ ನೀಡುತ್ತಿರುವ ಜನರ ನಡುವೆ ನಿಮ್ಮನ್ನು ಹೆಚ್ಚಿಸುವನು. ನಿಮಗೆ ಜಯ ಕೊಡುವನು. ಆತನು ನಿಮ್ಮನ್ನು ಅವಮಾನಕ್ಕೊಳಮಾಡುವದಿಲ್ಲ.

**"...ನಾನು ಯುಗದ ಸಮಾಪ್ತಿಯ ವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ." (ಮತ್ತಾ 28:20)** ಎಂದು ಯೇಸು ಕ್ರಿಸ್ತನು ವಾಗ್ದಾನ ಕೊಟ್ಟಿದ್ದಾನೆ. ಆತನು ಕೊನೆಯ ವರೆಗೂ ನಿಮ್ಮೊಂದಿಗಿದ್ದು ನಿಮ್ಮನ್ನು ಆಶೀರ್ವದಿಸಿ ಕಾಪಾಡುವನು.

# ಯೇಸು ಕ್ರಿಸ್ತನು ಮತ್ತೆ ಬರುತ್ತಾನೆ!



ಶಿಲುಬೆಯಲ್ಲಿ ನಮಗೋಸ್ಕರ ಮರಣಿಸಿ ಜೀವಂತವಾಗಿರುವ ಯೇಸು ಕ್ರಿಸ್ತನು ಮತ್ತೆ ಈ ಲೋಕಕ್ಕೆ ಬರಲಿದ್ದಾನೆ. ಆಗ ಈ ಲೋಕ ಅಂತ್ಯವಾಗುತ್ತದೆ.

ಈಗ ಯೇಸು ಕ್ರಿಸ್ತನು ತನ್ನ ಮಕ್ಕಳಾದ ನಮಗೋಸ್ಕರ ಪರಲೋಕದಲ್ಲಿ ಒಂದು ಸ್ಥಳವನ್ನು ಸಿದ್ಧಗೊಳಿಸುತ್ತಿದ್ದಾನೆ. **"...ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರಿಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು; ಯಾಕಂದರೆ ನಾನಿರುವ ಸ್ಥಳದಲ್ಲಿ ನೀವು ಸಹ ಇರಬೇಕು" (ಯೋಹಾನ 14:3)** ಎಂದು ಯೇಸು ಕ್ರಿಸ್ತನು ವಾಗ್ದಾನ ಮಾಡಿದ್ದಾನೆ.

ಈ ಲೋಕ ನಮಗೆ ಶಾಶ್ವತವಾದ ಸ್ಥಳವಲ್ಲ. ಈ ಲೋಕದ ಸಂಕಷ್ಟಗಳು ಸ್ವಲ್ಪ ಕಾಲ ಮಾತ್ರವೇ. ಆದರೆ ಪರಲೋಕದಲ್ಲಿ ಶಾಶ್ವತವಾಗಿ ಯೇಸು ಕ್ರಿಸ್ತನೊಂದಿಗೆ ಸಂತೋಷವಾಗಿ ಆನಂದವಾಗಿ ಜೀವಿಸುವೆವು. ಅಲ್ಲಿ ಮರಣವಿಲ್ಲ, ರೋಗವಿಲ್ಲ, ಕಣ್ಣೀರಿಲ್ಲ, ವೇದನೆ ಇಲ್ಲ.

ಆ ಸ್ಥಳಕ್ಕೆ ನಮ್ಮನ್ನು ಕರೆದುಕೊಂಡು ಹೋಗಲು ಯೇಸು ಕ್ರಿಸ್ತನು ಬರಲಿದ್ದಾನೆ. ಆತನ ಬರೋಣದಲ್ಲಿ ನಾವು ಸಂತೋಷವಾಗಿ

ಕಾಣಿಸಿಕೊಳ್ಳಬೇಕಾದರೆ, ಆತನಲ್ಲಿ ನೆಲೆಗೊಂಡಿರಬೇಕು. ಯೇಸು ಕ್ರಿಸ್ತನನ್ನು ರಕ್ಷಕನನ್ನಾಗಿ ಕರ್ತನನ್ನಾಗಿ ಅಂಗೀಕರಿಸಿಕೊಂಡವರು ಆತನ ಮೂಲಕ ಪಾಪ ಕ್ಷಮಾಪಣೆ ಹೊಂದಿದವರು. ಆತನಿಗೋಸ್ಕರ ಪವಿತ್ರ ಜೀವನ ಜೀವಿಸುವವರೇ ಸಂತೋಷವಾಗಿ ಪರಲೋಕ ರಾಜ್ಯಕ್ಕೆ ಹೋಗಲು ಸಾಧ್ಯ.

**"ಪ್ರಿಯರಾದ ಮಕ್ಕಳೇ, ಆತನು ಪ್ರತ್ಯಕ್ಷನಾಗುವಾಗ ನಾವು ಆತನ ಆಗಮನದಲ್ಲಿ ಆತನ ಮುಂದೆ ನಿಲ್ಲಲು ನಾಚಿಕೆಪಡದೆ ಧೈರ್ಯದಿಂದಿರುವಂತೆ ಆತನಲ್ಲಿ ನೆಲೆಗೊಂಡಿರೋಣ." (1 ಯೋಹಾನ 2:28).**

**"ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಲಿ. ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾದಾಗ ನಿಮ್ಮ ಆತ್ಮ ಪ್ರಾಣಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ. ನಿಮ್ಮನ್ನು ಕರೆಯುವವನು ನಂಬಿಗಸ್ತನು, ಆತನು ತನ್ನ ಕಾರ್ಯವನ್ನು ಸಾಧಿಸುವನು." (1 ಥೆಸ 5:23,24)**

ಕೃಪೆ ನಿಮ್ಮೊಂದಿಗಿರಲಿ!
ಆಮೆನ್!

# ಸಹೋ. ಮೋಹನ್ ಸಿ. ಲಾಜರಸ್ ಅವರ

## ಲೈವ್ ಟಿವಿ ಕಾರ್ಯಕ್ರಮಗಳು!

ಸತ್ಯಂ ಟಿವಿಯಲ್ಲಿ 'ಯೇಸು ಬಿಡಿಸುತ್ತಾನೆ'
ಸೋಷಿಯಲ್ ನೆಟ್‌ವರ್ಕ್,
ಯು-ಟ್ಯೂಬ್, ಫೇಸ್‌ಬುಕ್ ಹಾಗು
ಕಂಫರ್ಟರ್ ಟಿವಿಯಲ್ಲಿ



## ಪ್ರಾರ್ಥಿಸೋಣ ಬನ್ನಿ!

ಪ್ರತಿ ಶನಿವಾರ, ಭಾನುವಾರ **ಸಂಜೆ 7:00 ರಿಂದ 9:30 ವರೆಗೆ**

**ಪೌಲಿಯ ಒಡಕಿನ ಪ್ರಾರ್ಥನೆ!** (ಕೊನೆಯ ಶನಿವಾರ)

YouTube SUBSCRIBE

youtube.com/jesusredeemskannada
ಇಂದೆ SUBSCRIBE LIKE SHARE ಮಾಡಿರಿ
ದೇವರ ಆಶೀರ್ವಾದ ಹೊಂದಿರಿ

Jesusredeemsministries www.comfortertv.com Mohanclazarus




ಪ್ರತಿ ದಿನ ಬೆಳಗ್ಗೆ 6 ಗಂಟೆಗೆ
**Walk with Jesus**
ಕಾರ್ಯಕ್ರಮವನ್ನು
*Comforter TV, Youtube, Facebook, Instagram*
ಈ ಸಾಮಾಜಿಕ
ಜಾಲತಾಣಗಳಲ್ಲಿ ತಪ್ಪದೆ ವೀಕ್ಷಿಸಿ.

## ರಚೇತರನ್ನು ಕುರಿತು...



ಭಕ್ತಿಯುಳ್ಳ ಒಂದು ಹಿಂದು ಕುಟುಂಬದಲ್ಲಿ ಜನಿಸಿ ವೈರಾಗ್ಯವಾಗಿ ಬೆಳೆಸಲಾದ ಇವರು ತಮ್ಮ 14 ನೇ ವಯಸ್ಸಿನಲ್ಲಿ ಹೃದಯ ಉಬ್ಬಿಕೊಂಡು ಬಲ ಕಾಲು ನಡೆಯಲಾರದೆ ಇದ್ದರು. ವೈದ್ಯರು ಸಹ ಇವರನ್ನು ಕೈಬಿಟ್ಟರು. ಇವರನ್ನು ಯೇಸು ಕ್ರಿಸ್ತನು ಅದ್ಭುತವಾಗಿ ಗುಣಪಡಿಸಿದನು.

ಆ ನಂತರ ಯೇಸು ಕ್ರಿಸ್ತನು ಇವರನ್ನು ರಕ್ಷಿಸಿ ಅಭಿಷೇಕಿಸಿ ಸೇವೆಗೆ ಕರೆದು ಇಂದು ಶಕ್ತಿಯುತವಾಗಿ ಉಪಯೋಗಿಸುತ್ತಿದ್ದಾನೆ. 'ಯೇಸು ಬಿಡಿಸುತ್ತಾನೆ' ಎಂಬ ಸೇವೆಯ ಮೂಲಕ ಅನೇಕ ವಿಧಗಳಲ್ಲಿ ಪ್ರಪಂಚದಲ್ಲಿ ಅನೇಕ ಭಾಗಗಳಿಗೆ ಕರ್ತನು ಸಹೋದರರರನ್ನು ಕರೆದುಕೊಂಡು ಹೋಗಿ ಸಾವಿರಾರು ಜನರಿಗೆ ಆತ್ಮದಲ್ಲೂ ದೇಹದಲ್ಲೂ ಆಶೀರ್ವಾದವನ್ನು ದಯಪಾಲಿಸುತ್ತಿದ್ದಾನೆ.

ಈ ಸೇವೆಯ ಮೂಲಕ 'ಯೇಸು ಬಿಡಿಸುತ್ತಾನೆ' ಎಂಬ ಮಾಸ ಪತ್ರಿಕೆಯನ್ನು ಬಿಡುಗಡೆ ಮಾಡುತ್ತಿದ್ದೇವೆ. ಅಗತ್ಯವಿರುವವರು ನಮಗೆ ಬರೆಯಿರಿ. ಉಚಿತವಾಗಿ ಮಾಸಪತ್ರಿಕೆಯನ್ನು ನಿಮಗೆ ಕಳುಹಿಸಿಕೊಡುತ್ತೇವೆ.

**For Counselling and Prayer:**

Jesus Redeems MINISTRIES

JESUS REDEEMS MINISTRIES

Nalumavadi - 628211, Thoothukudi Dist., Tamilnadu, India.
**Phone:** +91 4639 - 35 33 33, **Whatsapp:** +91 8111071000
**For 24 hrs Prayer Support: +91 4639 - 35 35 35**
Email: goodnews@jesusredeems.org